[ Govt. of Karnataka C.R.P. 67]

| |
|---|
| Deposition Sheets (RP.No.57) Form No.4 |

IN THE COURT OF Addl. CIVIL JUDGE & J.M.F.C., KARKALA.

Criminal Case No. 1795/2023

ಪಿ.ಡಬ್ಲ್ಯು : 7 ಸಿ.ಡಬ್ಲ್ಯು : 8

ಸಾಕ್ಷಿದಾರನ ಹೆಸರು : ಜಗದೀಶ್ ಸಫಲಿಗ
ತಂದೆಯ ಹೆಸರು : ನಾರಯಣ ಸಫಲಿಗ
ಪ್ರಾಯ : 44 ವರ್ಷ
ಉದ್ಯೋಗ : ಚಾಲಕ
ವಾಸ : ತೆಳ್ಳಾರು.

ದಿನಾಂಕ 01.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಆರೋಪಿಯ ಪರಿಚಯ ಇರುವುದಿಲ್ಲ.

ಪೊಲೀಸರು ನನ್ನನ್ನು ಕರೆದಿರುವುದಿಲ್ಲ ನಾನು ಠಾಣೆಗೆ ಹೋಗಿದ್ದಾಗ ಪೊಲೀಸರು ಒಂದು ದಾಖಲೆಗೆ ಸಹಿ ಹಾಕುವಂತೆ ಕೋರಿರುತ್ತಾರೆ. ಅದರಂತೆ ದಾಖಲೆಗೆ ಸಹಿ ಹಾಕಿರುತ್ತೇನೆ. ಯಾವ ವಿಚಾರಕ್ಕೆ ಸಹಿ ಹಾಕಿರುತ್ತೇನೆ ಎಂದು ಗೊತ್ತಿಲ್ಲ. ಸಾಕ್ಷಿಯು ಸೊತ್ತು ಸ್ವಾಧೀನ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ಮಹಜರನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿಯು ವಾಹನವನ್ನು ಸ್ವಾ ಧೀನಪಡಿಸಿಸುವ ಸಮಯದಲ್ಲಿ ತೆಗೆದ ಭಾವಚಿತ್ರದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ, ಆದರೆ ಸದ್ರಿ ಭಾವಚಿತ್ರವನ್ನು ಯಾವ ವಿಚಾರಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ದಿಃ09.06.2023 ರಂದು ಕಾರ್ಕಳ ವೃತ್ತ ನೀರಿಕ್ಷಕರ ಕಚೇರಿ ಆವರಣದಲ್ಲಿ ನೀವು ಹಾಗೂ ಚಾಸಾ-9 ರವರ ಸಮಕ್ಷಮ ಆರೋಪಿಯು ಅಪಘಾತಪಡಿಸಿದ ಅಟೋರಿಕ್ಷಾ ನಂ. ಕೆಎ-19-ಎಡಿ-0078 ಠಾಣೆಗೆ ಹಾಜರುಪಡಿಸುವ ಸಮಯದಲ್ಲಿ ಮಹಜರು ಮಾಡಿ ನಿಮ್ಮ ಹಾಗೂ ಚಾಸಾ-6 ರವರ ಸಹಿಯನ್ನು ಠಾಣೆಯೆಲ್ಲಿಯೇ ಪಡಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸಹಿಯನ್ನು ಪಡೆದುಕೊಂಡಿರುತ್ತಾರೆ ಯಾವ ವಿಚಾರಕ್ಕೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ಸಮಯದಲ್ಲಿ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿ. ಸದ್ರಿ ಭಾವಚಿತ್ರವನ್ನು ನಿಪಿ-20 ಎಂದು ಗುರುತಿಸಲಾಯಿತು. ಆರೋಪಿಯುನಿಮ್ಮ ಪರಿಚಯಸ್ಥರಾಗಿದ್ದರಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ಃ ಶ್ರೀ ಬಿ ಎಸ್ ಎಸ್ ವಕೀಲರಿಂದ ಃ ಏನು ಇಲ್ಲ.
ಮರುವಿಚಾರಣೆ: ಇಲ್ಲ
ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ